# ಕರ್ನಾಟಕ ಸರ್ಕಾರ

ಸಂಖ್ಯೆ ಇಡಿ 46 ಎಸ್‌ಇಪಿ 06

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ 19.06.2006.

ಇಂದ:
ಸರ್ಕಾರದ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ,
ಶಿಕ್ಷಣ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಗೆ:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ.ಗ

4910
23-6-06

ಮಾನ್ಯರೆ,

ವಿಷಯ: ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಅನುದಾನಿತ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ: ಅಪರ ಆಯುಕ್ತರು, ಸಾ.ಶಿ. ಇಲಾಖೆ, ಧಾರವಾಡ ಇವರ ಪತ್ರ ಸಂಖ್ಯೆ ಜಿ3.ಶಾಶಿಅ.ಸ್ಪಷ್ಟೀಕರಣ/06-07 ದಿ. 27.04.06

*****

C8

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ದಿನಾಂಕ 27.04.06ರ ಪತ್ರದಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಅನುದಾನಿತ ಖಾಲಿ ಹುದ್ದೆಗಳನ್ನು ಭರ್ತಿಮಾಡುವ ಬಗ್ಗೆ 06 ಅಂಶಗಳ ಬಗ್ಗೆ ಸರ್ಕಾರದ ಸ್ಪಷ್ಟೀಕರಣ ಕೋರಿರುತ್ತಾರೆ. ಅದಕ್ಕೆ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಿದೆ:-

| ಕ್ರಮ ಸಂಖ್ಯೆ | ಸ್ಪಷ್ಟೀಕರಣ ಕೋರಿರುವ ಅಂಶ | ಸ್ಪಷ್ಟೀಕರಣಕ್ಕೆ ಉತ್ತರ |
|---|---|---|
| 1 | ದಿ. 17.01.04ರ ಪೂರ್ವದಲ್ಲಿ ಇಲಾಖೆ ಅನುಮತಿ ಪಡೆದು ನೇಮಕಾತಿ ಆಯ್ಕೆ ಪೂರ್ಣಗೊಳಿಸಿ, ಅನುಮೋದನೆ ಆಗದೆ ಬಾಕಿ ಇರುವ ಪ್ರಕರಣಗಳಲ್ಲಿ ಅನುಮೋದನೆ ಪ್ರಾಧಿಕಾರ ಯಾರಾಗಿರುತ್ತಾರೆ ?. | ದಿ. 17.01.04ರ ಆದೇಶದಲ್ಲಿ ನೇಮಕಾತಿ ಅನುಮೋದನೆಗೆ ಸಂಬಂದಿಸಿದಂತೆ ಪ್ರತ್ಯಾಯೋಜಿಸಲಾಗಿದ್ದ ಎಲ್ಲಾ ಅಧಿಕಾರವನ್ನು ರದ್ದುಪಡಿಸಲಾಗಿದೆ. ಸರ್ಕಾರದ ದಿ. 12.04.06ರ ಅದೇಶದ ಕಂಡಿಕೆ 04ರಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳೇ ಈ ಪ್ರಕರಣಗಳಲ್ಲು ಅನುಮೋದನೆ ಪ್ರಾಧಿಕಾರವಾಗಿರುತ್ತಾರೆ. |
| 2 | ದಿ. 17.01.04ರ ಪೂರ್ವದಲ್ಲಿ ಇಲಾಖೆ ಅನುಮತಿ ಪಡೆದು, ನಂತರ ನೇಮಕಾತಿ ಆಯ್ಕೆ ಪೂರ್ಣಗೊಳಿಸಿ, ಅನುಮೋದನೆ ಆಗದೆ ಬಾಕಿ ಇರುವ ಪ್ರಕರಣಗಳಲ್ಲಿ ಅನುಮೋದನೆ ಪ್ರಾಧಿಕಾರ ಯಾರಾಗಿರುತ್ತಾರೆ? | ಸರ್ಕಾರದ ದಿ. 12.04.06ರ ಅದೇಶದ ಕಂಡಿಕೆ 04ರಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳೇ ಈ ಪ್ರಕರಣಗಳಲ್ಲು ಅನುಮೋದನೆ ಪ್ರಾಧಿಕಾರವಾಗಿರುತ್ತಾರೆ. |

C8(3)

US SEC

| | | |
|---|---|---|
| 3 | ಸರ್ಕಾರದ ಆದೇಶ ದಿ. 17.01.04 ಹಾಗೂ ಸರ್ಕಾರದ ಆದೇಶ ದಿ. 12.04.06ರ ಅವಧಿಯಲ್ಲಿ ಅನುಮತಿ ಪಡೆದು ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿ ಅನುಮೋದನೆ ಬಾಕಿ ಇರುವ ಪ್ರಕರಣಗಳಲ್ಲಿ ಅನುಮೋದನೆ ಪ್ರಾಧಿಕಾರ ಯಾರಾಗಿರುತ್ತಾರೆ? | ದಿ. 17.01.04ರ ಆದೇಶದಲ್ಲಿ ನೇಮಕಾತಿ ಅನುಮೋದನೆಗೆ ಸಂಬಂಧಿಸಿದಂತೆ ಪ್ರತ್ಯಾಯೋಜಿಸಲಾಗಿದ್ದ ಎಲ್ಲಾ ಅಧಿಕಾರವನ್ನು ರದ್ದುಪಡಿಸಲಾಗಿದೆ. ಆದ್ದರಿಂದ ದಿ. 17.01.04ರಿಂದ 12.04.06ರ ಅವಧಿಯಲ್ಲಿ ಅನುಮತಿ ನೀಡಿರುವ ಪ್ರಕರಣಗಳು ಕ್ರಮಬದ್ಧವಲ್ಲ. ಆದ್ದರಿಂದ ಮೇಲಿನ ಅವಧಿಯಲ್ಲಿ ಉದ್ಭವವಾದ ಅನುದಾನಿತ ಖಾಲಿ ಹುದ್ದೆಗಳಿಗೆ ಅನುಮತಿ ನೀಡುವ ಹಾಗೂ ನೇಮಕಾತಿ ಅನುಮೋದಿಸುವ ಅಧಿಕಾರಿಗಳು ದಿ. 12.04.06ರ ಆದೇಶದ ಕಂಡಿಕೆ–4ರಲ್ಲಿ ತಿಳಿಸಿದವರಾಗಿರುತ್ತಾರೆ. |
| 4 | ಸರ್ಕಾರದ ದಿ. 12.04.06ರ ಆದೇಶದಲ್ಲಿ ಒಟ್ಟು 2106 ಹುದ್ದೆಗಳನ್ನು ಅನುದಾನಕ್ಕೊಳಪಡಿಸಲು ಅನುಮತಿಸಲಾಗಿದೆ. ಅಂದರೆ ಯಾವ ದಿನಾಂಕಕ್ಕೆ ಇದ್ದಂತೆ ತೆರವಾದ ಹುದ್ದೆಗಳು (ಕಟ್‌ಆಫ್ ದಿನಾಂಕ) ಅನ್ವಯಿಸುತ್ತದೆ ಎಂಬ ಬಗ್ಗೆ ಮಾರ್ಗದರ್ಶನಕೋರಿದೆ. | ದಿ. 12.04.06ರಂದು ಆದೇಶಹೊರಡಿಸಿದೆ. ಅದರಂತೆ ದಿನಾಂಕ 12.04.06ರ ಅಥವಾ ಅದಕ್ಕೆ ಪೂರ್ವದಲ್ಲಿ ಉದ್ಭವಿಸಿದ ಖಾಲಿ ಹುದ್ದೆಗಳಿಗೆ ಅದು ಅನ್ವಯವಾಗುತ್ತದೆ. |
| 5 | ಕ್ರಮ ಸಂಖ್ಯೆ 1,2 ಮತ್ತು 3ರ ಪ್ರಕರಣಗಳಿಗೆ ಸರ್ಕಾರದ ದಿ. 12.04.06ರ ಆದೇಶದಲ್ಲಿ ತಿಳಿಸಲಾದ ಮೌಲ್ಯಮಾಪನ ವಿದಾನವು ಅನ್ವಯವಾಗುವುದೇ? | ಸರ್ಕಾರದ ದಿ. 12.04.06ರ ಆದೇಶದಡಿ ಸ್ವೀಕೃತವಾದ ಪ್ರಸ್ತಾವನೆಗಳಿಗೆ ಮೌಲ್ಯಮಾಪನ ಅನ್ವಯವಾಗುವುದು. |
| 6 | ಈ ಆದೇಶದ ನಂತರ ಅನುದಾನಿತ ಶಾಲೆಗಳಲ್ಲಿ ಉದ್ಭವವಾಗುವ ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಗೆ ಅವಕಾಶವಿದೆಯೇ? | ಕಟ್‌ಆಫ್ ದಿನಾಂಕವನ್ನು ದಿ. 12.04.06 ನಿಗದಿಪಡಿಸಿರುವುದರಿಂದ ಆ ನಂತರ ಉದ್ಭವಾದ ಹುದ್ದೆಗಳನ್ನು ತುಂಬಲು ಅವಕಾಶವಿಲ್ಲ. |

2. ಈಗ ಅನುಮತಿ ನೀಡಿರುವ 2106 ಹುದ್ದೆಗಳ ಪರಿಮಿತಿಯಲ್ಲಿ ಹುದ್ದೆಗಳನ್ನು ತುಂಬತಕ್ಕದ್ದು. ಅಗತ್ಯಬಿದ್ದಲ್ಲಿ 03 ಆಯುಕ್ತರು ಚರ್ಚಿಸಿ ಆಯಾಯಾ ಆಯುಕ್ತಾಲಯದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ಬಗ್ಗೆ ಮಾಹಿತಿ ಪಡೆದು ಮುಂದಿನ ಕ್ರಮ ಕೈಗೊಳ್ಳಬಹುದು. ದಿ. 31.05.06ರ ವರೆಗೆ ಉದ್ಭವವಾಗುವ ಅನುದಾನಿತ ಖಾಲಿ ಹುದ್ದೆಗಳ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಕೂಡಲೇ ಸರ್ಕಾರಕ್ಕೆ ಒದಗಿಸುವಂತೆ ತಮ್ಮನ್ನು ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಿದ್ದಲಿಂಗಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ

19/6/06 ಶಿಕ್ಷಣ ಇಲಾಖೆ

US SEC